## ‘ಕಾಲೇಜು ರಂಗ’ ಮರು ಪ್ರಸಾರ

ಪ್ರೊ.ಬಿ.ಜಿ.ಎಲ್. ಸ್ವಾಮಿಯವರ ಕಾದಂಬರಿಯಾಧಾರಿತ ಚಲನಚಿತ್ರ ‘ಕಾಲೇಜು ರಂಗ’ (1976ರಲ್ಲಿ ಬಿಡುಗಡೆಯಾದದ್ದು) ವನ್ನು ಚಂದನವಾಹಿನಿ ಏಪ್ರಿಲ್ 5ರಂದು ಮರುಪ್ರಸಾರ ಮಾಡಿದ್ದಕ್ಕೆ ವಾಹಿನಿಗೆ ಧನ್ಯವಾದಗಳು. 1970–80ರ ಆಸುಪಾಸಿನಲ್ಲಿ ಹಲವು ಖಾಸಗಿ ಕಾಲೇಜುಗಳು ನಡೆಸಿರಬಹುದಾದ ಶಿಕ್ಷಣದ ಅವ್ಯವಸ್ಥೆ ಇದಕ್ಕೆ ಸ್ಫೂರ್ತಿ ಇರಬಹುದು. 40 ವರ್ಷಗಳ ಹಿಂದೆ ಲೇಖಕರು ಬಿಂಬಿಸಿದ್ದ ಚಿತ್ರಣ ಹಾಗೂ ಶಿಕ್ಷಣ ವ್ಯವಸ್ಥೆಯ ವೈಫಲ್ಯ ಈಗ ನಿಜವೆನಿಸಿದೆ.

-ಸುಂದರ್, ಬೆಂಗಳೂರು

## ಸಮಾಜಕ್ಕೆ ತಪ್ಪು ಸಂದೇಶ?

ಹಿಂದಿನ ಕಾಲದಲ್ಲಿ ಪಂಚಾಯಿತಿ ಕಟ್ಟೆ ಎಂದರೆ ಅದಕ್ಕೆ ಒಂದು ರೀತಿಯ ವಿಶಿಷ್ಟ ಸ್ಥಾನಮಾನವಿತ್ತು. ಊರಿನ ಹಿರಿಯರು ಅದನ್ನು ಸಮರ್ಥ ರೀತಿಯಲ್ಲಿ ನಿರ್ವಹಿಸಿ ಊರುಗಳಿಗೆ, ಪಂಚಾಯಿತಿ ಕಟ್ಟೆಗಳಿಗೆ ಗೌರವ ತರುತ್ತಿದ್ದರು. ಆದರೆ ಝೀ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ ‘ಬ್ರಹ್ಮಗಂಟು’ ಧಾರಾವಾಹಿಯಲ್ಲಿ ಪಂಚಾಯಿತಿ ಕಟ್ಟೆಗೆ ಅವಹೇಳನ ಮಾಡುವ ರೀತಿಯಲ್ಲಿ ಬಿಂಬಿಸಿದ್ದಾರೆ. ಆತ್ಮಹತ್ಯೆ ಮಹಾಪಾಪ ಎನ್ನುವ ಈಗಿನ ಕಾಲದಲ್ಲಿ, ಪಂಚಾಯಿತಿ ಮುಖ್ಯಸ್ಥ ನ್ಯಾಯ ಹೇಳುವ ಭರದಲ್ಲಿ ಹೆಂಗಸರಿಗೆ, ಹುಡುಗಿಯರಿಗೆ ತಾನು ತೋರಿಸಿದ ಗಂಡನ್ನು ಮದುವೆಯಾಗಬೇಕು ಇಲ್ಲ ಅಂದರೆ ಅವಳು ಸ್ವಯಂ ಹತ್ಯೆ ಮಾಡಿಕೊಳ್ಳಬೇಕು ಎಂದು ಹೇಳುವುದು ಸಮಾಜಕ್ಕೆ ತಪ್ಪು ಸಂದೇಶ ನೀಡಿದಂತೆ. ಇದು ಎಷ್ಟು ಸಮಂಜಸ ನೀವೇ ತಿಳಿಸಬೇಕು. ನಿರ್ದೇಶಕರು ಇಲ್ಲಿ ನಿಜವಾಗಿ ಎಡವಿದ್ದಾರೆ. ದಯವಿಟ್ಟು ಧಾರಾವಾಹಿಗಳಲ್ಲಿ ಇಂತಹವುಗಳನ್ನು ತೋರಿಸುವ ಮೊದಲು ಯೋಚಿಸಿ ಮುನ್ನಡೆಯಲಿ.

– ಎನ್.ಎಸ್. ಚಂದ್ರಶೇಖರ್, ಬೆಂಗಳೂರು

## ಆಹಾರಕ್ಕೆ ಬೆಲೆ ಇಲ್ಲವೇ?

ಸ್ಟಾರ್ ಸುವರ್ಣದಲ್ಲಿ ‘ಪ್ಯಾಟೆ ಹುಡ್ಗೀರ್ ಹಳ್ಳಿ ಲೈಫು’ಈಗಷ್ಟೆ ಆರಂಭವಾಗಿದೆ. ಬಿಂದಿಗೆಯಲ್ಲಿ ನೀರು ತುಂಬಿ ಕಂಬದ ಮೇಲೆ ಹಾಸಿದ ಹಲಗೆಯ ಮೇಲೆ ನಡೆದು ಸ್ಟೀಲ್ ತಪಾಲಿಯಲ್ಲಿ ನೀರು ಶೇಖರಿಸುವ ಟಾಸ್ಕ್‌ನಲ್ಲಿ ಸೋತ ಸ್ಪರ್ಧಿಗಳಿಗೆ ಮೊಟ್ಟೆಯನ್ನು ತಲೆಯ ಮೇಲೆ ಒಡೆದು ಶಿಕ್ಷಿಸಿದ್ದು ಸರಿಯಲ್ಲ. ಬದಲಾಗಿ ಬಾವಿಯಿಂದ ನೀರು ಸೇದುವುದೋ, ಮನೆ ಕೆಲಸವನ್ನೋ ಹೆಚ್ಚುವರಿಯಾಗಿ ಮಾಡಿಸಿ, ಇಲ್ಲವಾದರೆ ಒಂದು ಹೊತ್ತು ಊಟಾನೋ, ತಿಂಡಿನೋ ಕೊಡದೇ ಶಿಕ್ಷಿಸಬಹುದಿತ್ತು. ಆಹಾರ ಪದಾರ್ಥಗಳನ್ನು ಪೋಲು ಮಾಡಬಾರದೆಂಬ ಸಾಮಾನ್ಯ ಜ್ಞಾನ ಇಲ್ಲವೇ?

ಪೌಷ್ಟಿಕ ಆಹಾರವಿಲ್ಲದೆ ಎಷ್ಟೋ ಬಡ ಕುಟುಂಬಗಳು ಅಪೌಷ್ಟಿಕತೆಯಿಂದ ನರಳುತ್ತಿವೆ. ಅನಾಥ, ವೃದ್ಧ, ಅಬಲಾಶ್ರಮಗಳಲ್ಲಿ ತುತ್ತು ತುತ್ತಿಗೂ ಪರದಾಡುವ ಜೀವಗಳಿವೆ. ಸಾಲದ್ದಕ್ಕೆ ಬಟ್ಟೆ, ನೀರು, ನೆರಳೂ ಇಲ್ಲದೆ ರಸ್ತೆ ಮೇಲೆ ಎಷ್ಟೋ ಜನ ಬಿದ್ದಿದ್ದಾರೆ. ಹೀಗಿರುವಾಗ ಮೊಟ್ಟೆಯಂತಹ ಆಹಾರ ಪದಾರ್ಥವನ್ನು ಪೋಲು ಮಾಡುವುದು ಸರಿಯಲ್ಲ.

-ರತ್ನಾ ಅಶೋಕ ಗೊರವರ, ಧಾರವಾಡ

**ವಾರದ ಪತ್ರ**

## ಸುದ್ದಿ ವಾಹಿನಿಗಳು ಹೀಗೇಕೆ?

ನಮ್ಮ ವಿದ್ಯುನ್ಮಾನ ಸುದ್ದಿ ವಾಹಿನಿಗಳು ನೀಡುವ ಸುದ್ದಿ ಶ್ರೀ ಸಾಮಾನ್ಯನಿಗೆ, ಮಧ್ಯಮ ವರ್ಗದ ವೀಕ್ಷಕರಿಗೆ ನಿಷ್ಪ್ರಯೋಜಕ. ಜನರ ಬದುಕಿಗೆ ಆಗತ್ಯವಾದ, ಅವರ ಬಾಳನ್ನು ಸುಂದರಗೊಳಿಸಲು ನೆರವಾಗುವ, ಪ್ರಗತಿಶೀಲ ಬದುಕಿಗೆ ಮಾರ್ಗದರ್ಶನ ದೊರೆಯುವ, ಗುಣ ಸಂಪನ್ನತೆ ಹಾಗೂ ಕಾರ್ಯಕ್ಷಮತೆಗಳು ನಿತ್ಯದ ಮಂತ್ರಗಳಾಗುವಂತಹ ಸುದ್ದಿ, ಘಟನೆಗಳನ್ನು ಟಿ.ವಿ. ಚಾನೆಲ್‌ಗಳು ಪ್ರಸಾರ ಮಾಡಬೇಕು.

ಇವುಗಳ ಬದಲು ಸಿ.ಎಂ. ರಾತ್ರಿ ಎಲ್ಲಿ ವಿಶ್ರಾಂತಿ ಪಡೆದರು, ಬೆಳಿಗ್ಗೆ ನಾಷ್ಟಾ ಯಾವ ಹೋಟೇಲ್‌ನಲ್ಲಿ ಸೇವಿಸಿದರು, ತಿಂಡಿಯಲ್ಲಿ ಯಾವುದನ್ನು ಅವರು ಆಸಕ್ತಿಯಿಂದ ಸೇವಿಸಿದರು, ಬಿ.ಜೆ.ಪಿ. ವರಿಷ್ಠ ಅಮಿತ್ ಶಾ ತಮ್ಮ ಭಾಷಣದಲ್ಲಿ ಬಾಯಿ ತಪ್ಪಿ ಯಡಿಯೂರಪ್ಪ ಭ್ರಷ್ಟಾಚಾರಿ ಎಂದು ಹೇಳಿದರು, ಇಂಥವರು ಕಾಂಗ್ರೆಸ್ ಪಕ್ಷ ತ್ಯಜಿಸಿ, ಜೆಡಿಎಸ್ ಸೇರಿದಾಗ ಕಾರ್ಯಕರ್ತರು ಕಾಂಗ್ರೆಸ್ ಪಕ್ಷಕ್ಕೆ ಜಯಕಾರ ಹಾಕಿದರು, ಆಮೇಲೆ ತಪ್ಪು ಅರಿವಾದ ಬಳಿಕ ಜೆಡಿಎಸ್‌ಗೆ ಜೈಕಾರ… ಇಂತಹ ಸುದ್ದಿಗಳನ್ನೆಲ್ಲ ಮೇಲಿಂದ ಮೇಲೆ ಚಾನೆಲ್‌ಗಳು ಪ್ರಸಾರ ಮಾಡುತ್ತಿರುವುದನ್ನು ನೋಡಿದಾಗ ಚಾನೆಲ್‌ಗಳಿಗೆ ಸುದ್ದಿಯ ಅಭಾವವೇ? ಶ್ರೀಸಾಮಾನ್ಯನಿಗೆ ಇಂತಹ ಸುದ್ದಿಗಳು ಬೇಕೆ? ಎಂಬಂತಹ ಪ್ರಶ್ನೆಗಳು ಮನದಲ್ಲಿ ಏಳುತ್ತವೆ.

–ಸದಾನಂದ ಹೆಗಡೆಕಟ್ಟೆ, ಮೂಡುಬಿದರೆ

## ನಾಟಕೀಯ ಸಂಭಾಷಣೆ

ಉದಯದಲ್ಲಿ ಪ್ರಸಾರವಾಗುತ್ತಿರುವ ‘ಮಾನಸ ಸರೋವರ’ ಧಾರಾವಾಹಿಯಲ್ಲಿ ಮೂರು ಮಂದಿ ಹಿರಿಯ ಕಲಾವಿದರನ್ನು ಬಿಟ್ಟರೆ ಬೇರೆ ಕಲಾವಿದರೆಲ್ಲಾ ಸ್ಪಷ್ಟತೆಯೇ ಇಲ್ಲದೆ ನಾಟಕೀಯವಾಗಿ ಮಾತನಾಡುತ್ತಾರೆ. ಇದನ್ನು ಕೇಳಲು ಬಹಳ ಕಷ್ಟವಾಗುತ್ತದೆ.

–ಸೀತಾ ಕೇಶವ, ಸಿದ್ದಿ

## ಉತ್ತಮ ಕಾರ್ಯಕ್ರಮ

ಅಂತರರಾಷ್ಟ್ರೀಯ ಖ್ಯಾತಿಯ ಕೊಳಲು ವಾದಕ ಪ್ರವೀಣ್ ಗೋಡ್ಖಿಂಡಿಯವರು ಝೀ ಕನ್ನಡ ವಾಹಿನಿಯ ಜನ ಸೂರೆಗೊಂಡ ಮನರಂಜನಾ ಕಾರ್ಯಕ್ರಮ ಸರಿಗಮಪ ಸೀಸನ್ 14ರ ಸ್ಪರ್ಧಿಗಳ ಹಾಡುಗಾರಿಕೆಗೆ ಕೊಳಲನ್ನು ನುಡಿಸಿ ಕಾರ್ಯಕ್ರಮದ ಘನತೆಯನ್ನು ಹೆಚ್ಚಿಸಿದ್ದಾರೆ. ಎಂಟು ಅಡಿ ಎತ್ತರದ ಕಾಂಟ್ರಾಬಾಸ್ ಕೊಳಲು ನುಡಿಸಲು ಭಾರತದಲ್ಲಿ ಪ್ರಯತ್ನಿಸಿರುವವರಲ್ಲಿ ಮೊದಲಿಗರೆಂಬುದನ್ನು ಪ್ರಚುರಪಡಿಸಿ ಅಂತಹ ಕೊಳಲನ್ನು ವೇದಿಕೆಯಲ್ಲಿ ನುಡಿಸಿ ಪ್ರದರ್ಶನ ನೀಡಿರುವುದು ಸಂತೋಷದ ಸಂಗತಿ. ಇಂತಹ ಕಾರ್ಯಕ್ರಮಗಳು ಇನ್ನೂ ಹೆಚ್ಚು ಮೂಡಿ ಬರಲಿ.

—ಕೆ.ಎನ್. ಪ್ರಭಾಕರ ಗುಪ್ತ, ಹಾಸನ

## ಅಜ್ಜಿಯ ಕಿತಾಪತಿ

ಕಲರ್ಸ್ ಕನ್ನಡ ವಾಹಿನಿಯಲ್ಲಿ ಸಂಜೆ 6.30ಕ್ಕೆ ‘ಕುಲ ವಧು’ ಧಾರಾವಾಹಿ ಚೆನ್ನಾಗಿ ಬರ್ತ್ತಿದೆ. ಆದರೆ ವಚನಾಳ ಅಜ್ಜಿಯ ಕುತಂತ್ರ ಸುಳ್ಳು, ವಂಚನೆ ಮನೆಯವರಿಗೆ ತಿಳಿಯುವುದಿಲ್ಲವೇ? ಅವರು ಹಿರಿಯರಾಗಿದ್ದು ನಾಚಿಕೆಗೇಡಿ ಕೆಲಸ ಮಾಡಿದ್ದಾರೆ. ಅದೆಷ್ಟು ದ್ವೇಷ ಅವರಿಗೆ ಆ ಮುಗ್ಧೆ ಧನ್ಯಳ ಮೇಲೆ? ಧನ್ಯಳಿಗೆ ಅವಳು ಹೆತ್ತ ಮಗುವನ್ನು ವಚನಳಿಂದ ಕೊಡಿಸಿ. ಅಜ್ಜಿಯ ಕಿತಾಪತಿ ಮನೆಯವರಿಗೆ ತಿಳಿಯುವಂತೆ ಮಾಡಿ.

—ಮೃದುಲ ಶಿವಕುಮಾರ್, ಮುಂಬಯಿ

## ಕನ್ನಡದಲ್ಲಿ ಕಾಮೆಂಟರಿ

ಈ ಬಾರಿಯ ಐಪಿಎಲ್ ಕ್ರಿಕೆಟ್ ಪಂದ್ಯಾವಳಿಗಳ ವೀಕ್ಷಕ ವಿವರಣೆ ಕನ್ನಡ ಭಾಷೆಯಲ್ಲಿ ಪ್ರಸಾರವಾಗುತ್ತಿದ್ದು, ಹಿಂದಿ ಅಥವಾ ಇಂಗ್ಲಿಷ್ ಭಾಷೆ ತಿಳಿಯದ ಕನ್ನಡಿಗ ಕ್ರಿಕೆಟ್ ಪ್ರಿಯರಿಗೆ ಸಂತಸ ತಂದಿದೆ. ಕನ್ನಡ ಭಾಷೆಯಲ್ಲೂ ವೀಕ್ಷಕ ವಿವರಣೆ ಪ್ರಸಾರವಾಗಬೇಕೆನ್ನುವುದು ಕನ್ನಡಿಗರ ಬಹುದಿನದ ಕನಸಾಗಿತ್ತು. ದೂರದರ್ಶನ ಕೇಂದ್ರ ಈ ವ್ಯವಸ್ಥೆಯನ್ನು ಮಾಡಬೇಕಿತ್ತು. ಕನ್ನಡದ ಖಾಸಗಿ ವಾಹಿನಿಯೊಂದು ತನ್ನ ಧಾರಾವಾಹಿ ವ್ಯಾಮೋಹವನ್ನು ಕೆಲಕಾಲ ಬದಿಗೊತ್ತಿ, ಈ ಕೊರತೆಯನ್ನು ತುಂಬುತ್ತಿರುವುದು ಶ್ಲಾಘನೀಯ.

—ರಮಾನಂದ ಶರ್ಮಾ, ನವದೆಹಲಿ